1. ಖರ್ಚು ಮಾಡಿರುವ ಹಣ :		(ರೂ.ಲಕ್ಷಗಳಲ್ಲಿ)
ನೀರು ಸರಬರಾಜು	: ಕೊಳವೆ ಬಾವಿಗಳಿಗೆ	1.33
ವಿದ್ಯುಚ್ಛಕ್ತಿ	: ಕೊಳವೆ ಬಾವಿಗೆ ವಿದ್ಯುಚ್ಛಕ್ತಿ ಒದಗಿಸಲು	0.65
ಇತರೆ ಅಭಿವೃದ್ಧಿ ಕಾಮಗಾರಿಗಳು :	ಸರ್ವೆ ಕೆಲಸ, ರಸ್ತೆ ನಿರ್ಮಾಣ ಹಾಗೂ ಕಟ್ಟಡ ನಿರ್ಮಾಣ ಕೆಲಸಗಳು	7.22
		9.25

2. ಪ್ರಗತಿಯ ಹಂತ

ಹಾಸನ ಬೆಳವಣಿಗೆ ಕೇಂದ್ರದ ಮೊದಲನೇ ಹಂತದ (654 ಎಕರೆ) ನೀಲಿ ನಕ್ಷೆಯ ಅನುಮೋದಿಸಲ್ಪಟ್ಟಿದ್ದು ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ನಿರ್ಮಾಣ, ಚರಂಡಿ, ವಸತಿಗೃಹ, ಗೋದಾಮು ಹಾಗೂ ಕಛೇರಿ ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ.

3. ಪೂರ್ಣ ಮುಗಿಸುವ ಗುರಿ

ಮೊದಲನೇ ಹಂತದಲ್ಲಿರುವ ರಸ್ತೆ ವಸತಿ ಗೃಹ ಗೋದಾಮು ಹಾಗೂ ಕಛೇರಿ ಕಟ್ಟಡಗಳು ಡಿಸೆಂಬರ್ 1966 ರೊಳಗೆ ಮುಗಿಯಲಿವೆ. 2.5 ಎಂ.ಜಿ.ಡಿ. ಸಾಮರ್ಥ್ಯದ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳನ್ನು ಸದ್ಯದಲ್ಲಿಯೇ, ಗುತ್ತಿಗೆದಾರರಿಗೆ ವಹಿಸುವ ಕಾರ್ಯ ಕೊನೆಯ ಹಂತದಲ್ಲಿದೆ. ಸದರಿ ಯೋಜನೆಯು ಸುಮಾರು ಒಂದೂವರೆ ವರ್ಷದೊಳಗೆ ಪೂರ್ಣಗೊಳ್ಳುವುದು.

ಇ) ಹೌದು ಬಂದಿದ್ದಾರೆ.

ಇದುವರೆವಿಗೂ 8 ಕೈಗಾರಿಕೆಗಳಿಗೆ ಹಾಸನ ಕೈಗಾರಿಕಾ ಪ್ರದೇಶದಲ್ಲಿ 32 ಎಕರೆಯನ್ನು ಈಗಾಗಲೇ ಮಂಜೂರು ಮಾಡಲಾಗಿದೆ.

ಕರ್ನಾಟಕ ಬ್ರಿವರೀಸ್‌ರವರಿಗೆ 2000 ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದಿಸಲು ಮಂಜೂರಾತಿಯನ್ನು ನೀಡಲಾಗಿದ್ದು ಎಷ್ಟು ಎಕರೆ ಪ್ರದೇಶವನ್ನು ಕೊಡಬೇಕು ಎಂಬ ವಿಷಯವು ಭೂಮಿ ಅಡಿಲ್ ಸಮಿತಿಯು ತೀರ್ಮಾನ ಕೈಗೊಳ್ಳುವ ಹಂತದಲ್ಲಿದೆ.

ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಉತ್ಪಾದಿಸುವುದು

550 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಸಕ್ಕರೆ ಕಾರ್ಖಾನೆಗಳ ಮೂಲಕ ವಿದ್ಯುತ್ ಉತ್ಪಾದಿಸುವ ಯೋಜನೆ ಯೋಜನೆ ಏನಾದರೂ ಮಾಡಲು ನಿರ್ಧರಿಸಿದೆಯೇ?

ಆ) ನಿರ್ಧರಿಸಿದ್ದಲ್ಲಿ, ಈಗಾಗಲೇ ಗುರುತಿಸಿರುವ ಸಕ್ಕರೆ ಕಾರ್ಖಾನೆಗಳೆಷ್ಟು, ಇದರಿಂದ ಒಟ್ಟು ಎಷ್ಟು ಪ್ರಮಾಣದ ವಿದ್ಯುತನ್ನು ಉತ್ಪಾದಿಸಬಹುದು.

ಇ) ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ತಗಲುವ ವೆಚ್ಚ ಎಷ್ಟು;

ಈ) ಈ ರೀತಿ ಉತ್ಪಾದಿಸುವ ಮುಂದೆ ಬರುವ ಖಾಸಗಿ ಕಂಪನಿಗಳಿಗೆ ಸರ್ಕಾರ ಸಹಾಯ ಧನ ಏನಾದರೂ ನೀಡುವ ಯೋಜನೆ ಇದೆಯೇ?

ಶ್ರೀ ಪಿ. ಸಿ. ಸಿದ್ದನಗೌಡರು (ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಸಕ್ಕರೆ ಕಾರ್ಖಾನೆಗಳ ಮೂಲಕ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಸರ್ಕಾರ ನಿರ್ಧರಿಸಿದೆ.

ಆ) ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ತಮ್ಮದೇ ಆದ ವಿದ್ಯುತ್ ಉತ್ಪಾದನಾ ಘಟಕವನ್ನು ಹೊಂದಬೇಕೆಂದು ಸರ್ಕಾರ ಬಯಸಿದೆ. ರಾಜ್ಯದ 30 ಸಕ್ಕರೆ ಕಾರ್ಖಾನೆಗಳ ಪೈಕಿ ಬೆಳಗಾವಿ ಜಿಲ್ಲೆಯ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಉಗಾರ ಶುಗರ್ಸ ವರ್ಕ್ಸ ಹಾಗೂ ಮಂಡ್ಯ ಜಿಲ್ಲೆಯ ಮೈಸೂರು ಸಕ್ಕರೆ ಕಂಪನಿ ವಿದ್ಯುತ್ ಉತ್ಪಾದಿಸುವ ಬಗ್ಗೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತವೆ. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯು ಒಟ್ಟು 28.41 ಮೆ.ವಾಟ್ ಮೈಸೂರು ಸಕ್ಕರೆ ಕಾರ್ಖಾನೆಯು 15 ಮೆ.ವಾಟ್ ಹಾಗೂ ಉಗಾರ ಶುಗರ್ಸ 18 ಮೆ. ವಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಗುರಿ ಹಾಕಿ ಕೊಂಡಿರುತ್ತದೆ.

ಇ) ಒಂದು ಮೆಗಾವಾಟ್ ವಿದ್ಯುತ್ ಉತ್ಪಾದಿಸಲು ಸುಮಾರು ರೂ. 2.50 ಕೋಟಿ ವೆಚ್ಚ ತಗಲುವ ಅಂದಾಜಿರುತ್ತದೆ.

ಈ) ಇದೆ.

ವಿರಾಜಪೇಟೆಗೆ ಅಸಮರ್ಪಕ ನೀರು ಸರಬರಾಜು

551 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆಗೆ ಈಗ ಸರಬರಾಜಾಗುತ್ತಿರುವ ನೀರು ಸಾಕಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಏನು ಕ್ರಮ ಕೈಗೊಂಡಿದೆ?